ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ

1) ಹಿಪ್ಪುನೇರಳೆ ಸಸಿಗಳನ್ನು ಬೆಳೆಸಿ ಮಾರಾಟ ಮಾಡುವುದು.

2) ಹಿಪ್ಪುನೇರಳೆ ಮರ ಬೆಳೆಸುವ ಪ್ರಾತ್ಯಾಕ್ಷತಾ ಘಟಕ

3) ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಶೇಕಡ 75 ಸಹಾಯ ಧನ.

ಅ)	ವಿವರ	ಸಿರಸಿ	ಯಲ್ಲಾಪುರ	ಅಂಕೋಲ
1.	ಹಿಪ್ಪುನೇರಳೆ ವಿಸ್ತೀರ್ಣ (ಎಕರೆಗಳಲ್ಲಿ)	279.25	167.20	122.10
2.	ಉತ್ಪಾದಿಸಿದ ಗೂಡಿನ ಪ್ರಮಾಣ (ಮೆ.ಟನ್ನು)	25.5	10.0	4.2
3.	ಸರಾಸರಿ ಇಳುವರಿ 100 ಮೊಟ್ಟಗೆ (ಕೆ.ಜಿ. ಗಳಲ್ಲಿ)	59.5	54.3	45.8

ಇ) ಬಂದಿರುತ್ತೆ.

ಯಲ್ಲಾಪುರ ತಾಲ್ಲೂಕಿನಲ್ಲಿ ಮಾತ್ರ ಕಳೆದ ಸಾಲಿಗಿಂತ ಸ್ವಲ್ಪ ಕಡಿಮೆ ಗೂಡಿನ ಉತ್ಪಾದನೆ ಕಡಿಮೆಯಾಗಿರುತ್ತದೆ.

ಈ) ಉಪ ಪ್ರಶ್ನೆ "ಬಿ"ನಲ್ಲಿ ಸೂಚಿಸಿರುವ ಕಾರ್ಯಕ್ರಮಗಳನ್ನು ಗೂಡಿನ ಉತ್ಪಾದನೆಯನ್ನು ಹೆಚ್ಚಿಸಲು ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಷಯ :-ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 845 (752)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು (ಅವುಗಳ ವಿವರಗಳನ್ನು ಒದಗಿಸುವುದು)?

ಆ) ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ?.

ಶ್ರೀ ಉಮೇಶ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿರುತ್ತವೆ. ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು, ರಾಜ್ಯದಲ್ಲಿ ಇನ್ನೂ 24 ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ.

ಅನುಬಂಧ - ಅ

ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು
ಸಕ್ಕರೆ ಕಾರ್ಖಾನೆಗಳು

ಕ್ರ. ಸಂ.	ಸಕ್ಕರೆ ಕಾರ್ಖಾನೆಯ ಹೆಸರು	ಕಬ್ಬು ಅರೆಯುವ ಹಾಲಿ ಇರುವ	ಸಾಮರ್ಥ್ಯ ಪ್ರಸ್ತಾವಿತ	ಪ್ರಾರಂಭಿಕ ವರ್ಷ
ಸಹಕಾರಿ ವಲಯ				
1.	ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಹುಮನಾಬಾದ್ ತಾ : ಬೀದರ್	3500	-	1968-69
2.	ಭದ್ರಾ ಸಸಕಾ ನಿ. ದೊಡ್ಡಬಾತಿ, ದಾವಣಗೆರೆ	1250	2500	1978-79
3.	ದಕ್ಷಿಣ ಕನ್ನಡ ಸಸಕಾ ನಿ. ಬ್ರಹ್ಮಾವರ ದಕ್ಷಿಣ ಕನ್ನಡ ಜಿಲ್ಲೆ	1250	2500	1984-85
4.	ದೂದ್‌ಗಂಗಾ ಕೃಷ್ಣ ಸಸಕಾ ನಿ. ಚಿಕ್ಕೋಡಿ	3500	-	1974-75
5.	ಘಟಪ್ರಭಾ ಸಸಕಾ ನಿ. ಗೋಕಾಕ್ ಬೆಳಗಾಂ	1250	3500	1979-80
6.	ಹಾಲಸಿದ್ದನಾಥ ಸಸಕಾ ನಿ. ನಿಪ್ಪಾಣಿ ಬೆಳಗಾಂ	1250	2500	1986-87
7.	ಹೇಮಾವತಿ ಸಸಕಾ ಶ್ರೀನಿವಾಸಪುರ ಚನ್ನರಾಯಪಟ್ಟಣ ತಾ : ಹಾಸನ	1250	2500	1984-85
8.	ಹಿರಣ್ಯಕೇಶಿ ಸಸಕಾ ನಿ. ಸಂಕೇಶ್ವರ ಹುಕ್ಕೇರಿ ತಾ : ಬೆಳಗಾಂ ಜಿಲ್ಲೆ	5000	-	1960-61
9.	ಕರ್ನಾಟಕ ಸಸಕಾ ಲಿ. ಹಾವೇರಿ ತಾ : ಧಾರವಾಡ ಜಿಲ್ಲೆ	1250	2500	1983-84
10.	ಕಂಪ್ಲಿ ಸಸಕಾ ನಿ. ಕಂಪ್ಲಿ, ಬಳ್ಳಾರಿ ಜಿಲ್ಲೆ	1250	-	1957-58
11.	ಮಲಪ್ರಭಾ ಸಸಕಾ ನಿ. ಎಂ.ಕೆ. ಹುಬ್ಬಳ್ಳಿ ಬೈಲಹೊಂಗಲ ತಾ : ಬೆಳಗಾಂ ಜಿಲ್ಲೆ	3500	5000	1970-71

12. ಪಾಂಡವಪುರ ಸಸಕಾ ನಿ. ಪಾಂಡವಪುರ ಮಂಡ್ಯ ಜಿಲ್ಲೆ	1500	3500	1959-60
13. ರಾಯಬಾಗ್ ಸಸಕಾ ನಿ. ರಾಯಬಾಗ್ ಬೆಳಗಾಂ ಜಿಲ್ಲೆ	2500	-	1977-78
14. ಶ್ರೀ. ಶ್ರೀ ರಾಮ ಸಸಕಾ ನಿ. ಚುಂಚನಕಟ್ಟೆ ಕೆ.ಆರ್ ನಗರ ತಾ : ಮೈಸೂರು ಜಿಲ್ಲೆ.	1250	-	1979-80
15. ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಆಳಂದ್ ಬೂಸನೂರು, ಗುಲ್ಬರ್ಗಾ ಜಿಲ್ಲೆ.	1250	-	1988-89
16. ವಾಣಿವಿಲಾಸ ಸಸಕಾ ಲಿ. ಹಿರಿಯೂರು ಚಿತ್ರದುರ್ಗ ಜಿಲ್ಲೆ	1250	-	-
17. ನಂದಿ ಸಸಕಾ ನಿ. ಕೃಷ್ಣನಗರ, ಬಿಜಾಪುರ	2500	-	1991-92
ಸಾರ್ವಜನಿಕ ಕ್ಷೇತ್ರ			
1. ಮೈಸೂರು ಶುಗರ್ ಕಂ. ಲಿ. ಮಂಡ್ಯ	5000	-	1933
2. ಎಂ.ಪಿ.ಎಂ ಶುಗರ್ಸ್ ಲಿ. ಭದ್ರಾವತಿ	2500	5000	1984
ಜಂಟಿ ಕ್ಷೇತ್ರ			
1. ಗಂಗಾವತಿ ಶುಗರ್ಸ್ ಗಂಗಾವತಿ, ರಾಯಚೂರು	2500	-	1975-76
2. ದಾವಣಗೆರೆ ಶುಗರ್ಸ್ ಕುಕ್ಕವಾಡ, ದಾವಣಗೆರೆ ತಾ : ಚಿತ್ರದುರ್ಗ ಜಿಲ್ಲೆ	1250	2500	1974
ಖಾಸಗಿ ಕ್ಷೇತ್ರ			
1. ಶ್ರೀ. ಚಾಮುಂಡೇಶ್ವರಿ ಶುಗರ್ಸ್, ಕೆ.ಎಂ. ದೊಡ್ಡಿ, ಮಂಡ್ಯ ಜಿಲ್ಲೆ	4000	6500	1974
2. ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಗೌರಿಬಿದನೂರು, ಕೋಲಾರ ಜಿಲ್ಲೆ	1250	2500	1965-66
3. ಇಂಡಿಯಾ ಶುಗರ್ಸ್ ಅಂಡ್ ರಿಫೈನರೀಸ್ ಲಿ. ಹೊಸಪೇಟೆ ಬಳ್ಳಾರಿ ಜಿಲ್ಲೆ	2000	-	1934
4. ಮಹದೇಶ್ವರ ಶುಗರ್ಸ್ ಕೊಳ್ಳೆಗಾಲ ಮೈಸೂರು ಜಿಲ್ಲೆ	2500	-	1975-76

5.	ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ. ದೇವನೂರು,	1500	2500	1973
6.	ಗೋದಾವರಿ ಶುಗರ್ಸ್ ಲಿ. ಸಮೀರವಾಡಿ ಬಿಜಾಪುರ ಜಿಲ್ಲೆ	5000	6440	1972
7.	ತುಂಗಭದ್ರ ಶುಗರ್ಸ್ ಮಿಲ್ಸ್ ಲಿ. ಶಿವಮೊಗ್ಗ	2500	5000	1954
8.	ಉಗಾರ್ ಶುಗರ್ ಮಿಲ್ಸ್ ಲಿ. ಉಗಾರ್‌ಖುರ್ದ್ ಬೆಳಗಾಂ ಜಿಲ್ಲೆ	5000	7500	1942
9.	ಬನ್ನಾರಿ ಅಮ್ಮನ್ ಶುಗರ್ಸ್ ಲಿ. ಅಲಗಂಬಿ ಹಳ್ಳಿ ನಂಜನಗೂಡು ತಾ : ಮೈಸೂರು ಜಿಲ್ಲೆ	2500	5000	1992-93

ಅಧ್ಯಕ್ಷರು :- ಮಂಡಿಸಲಾಯಿತು. ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಮಂಡಿಸುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು.

I ಶ್ರೀ ಜೆ. ಹೆಚ್. ಪಟೀಲ್ (ಮುಖ್ಯ ಮಂತ್ರಿ) ಅವರು :- ಅಧ್ಯಕ್ಷರೇ,

1978 ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3) ನೇ ಕಲಮಿನ ಮೇರೆಗೆ ;

1) 1957 ನೇ ಇಸವಿಯ ಕರ್ನಾಟಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 22-12-1995 ರಂದು ಹೊರಡಿಸಲಾದ ಸಿಆಸುಇ 8 ಸೇ ಇವಿ 93 ನೇ ಕ್ರಮಾಂಕದ ಅಧಿಸೂಚನೆ ;

2) 1957 ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 22-3-1996 ರಂದು ಹೊರಡಿಸಲಾದ ಸಿಆಸುಇ 15 ಸೇಇವಿ 95 ನೇ ಕ್ರಮಾಂಕದ ಅಧಿಸೂಚನೆ ;

1964 ನೇ ಇಸವಿಯ ಕರ್ನಾಟಕ ಸಿನಿಮಾ ನಿಯಂತ್ರಣ ಅಧಿನಿಯಮದ 22ನೇ ಕಲಮಿನ ಮೇರೆಗೆ ;

3) ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಶ್ರೀ ನೀಲಕಂಠೇಶ್ವರ ಸಂಚಾರಿ ಚಿತ್ರಮಂದಿರವನ್ನು ಆರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ 27-6-1996 ರಂದು ಹೊರಡಿಸಲಾದ ಹೆಚ್‌ಡಿ 15 ಸಿಎನ್‌ಎ 96 ನೇ ಕ್ರಮಾಂಕದ ಅಧಿಸೂಚನೆ ;